ವಿದೇಶಾಂಗ ವ್ಯವಹಾರಗಳು ಮತ್ತು ಜವಳಿ ಖಾತೆ ರಾಜ್ಯ ಸಚಿವ ಶ್ರೀ ಪಬಿತ್ರಾ ಮಾರ್ಗೆರಿಟಾ ಅವರಿಂದ ಸಮೋವಾ ಮತ್ತು ನಾವೊರೊಗೆ ಭೇಟಿ (16-22 ಅಕ್ಟೋಬರ್ 2026)

ವಿದೇಶಾಂಗ ವ್ಯವಹಾರಗಳು ಮತ್ತು ಜವಳಿ ಖಾತೆ ರಾಜ್ಯ ಸಚಿವ ಶ್ರೀ ಪಬಿತ್ರಾ ಮಾರ್ಗೆರಿಟಾ [MoS (PM)], 2026 ರ ಅಕ್ಟೋಬರ್ 16 ರಿಂದ 22 ರವರೆಗೆ ಸಮೋವಾ ಮತ್ತು ನಾವೊರೊ ಗಣರಾಜ್ಯಕ್ಕೆ ಅಧಿಕೃತ ಭೇಟಿ ನೀಡಿದರು.

2. ಸಮೋವಾಗೆ ಭೇಟಿ ನೀಡಿದ ಸಮಯದಲ್ಲಿ, MoS(PM) ಅವರಿಗೆ ಸಮೋವಾ ಪ್ರಧಾನಮಂತ್ರಿ, ಗೌರವಾನ್ವಿತ La'aulialemalietoa Leuatea Polāta'ivao Fosi Schmidt ಮತ್ತು ಅವರ ಸಂಪುಟ ಸದಸ್ಯರು ಸಾಂಪ್ರದಾಯಿಕ 'ಎವಾ ಸಮಾರಂಭದ ಮೂಲಕ ಸ್ವಾಗತ ನೀಡಿದರು. MoS (PM) ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿದರು ಮತ್ತು ಸಾಮರ್ಥ್ಯ ವರ್ಧನೆ, ಡಿಜಿಟಲ್ ಅಭಿವೃದ್ಧಿ, ಹವಾಮಾನ ಸ್ಥಿತಿಸ್ಥಾಪಕತ್ವ, ಆರ್ಥಿಕ ತೊಡಗುವಿಕೆ ಮತ್ತು ಬಹುಪಕ್ಷೀಯ ಸಮಸ್ಯೆಗಳಲ್ಲಿ ಸಹಕಾರದ ಬಗ್ಗೆ ಚರ್ಚಿಸಿದರು.

3. ಶಿಕ್ಷಣ, ಆರೋಗ್ಯ ಮತ್ತು ವೃತ್ತಿಪರ ತರಬೇತಿಗೆ ಸುಧಾರಿತ ಪ್ರವೇಶದ ಮೂಲಕ ಮಕ್ಕಳು ಮತ್ತು ಅಂಗವಿಕಲ ವ್ಯಕ್ತಿಗಳ ಸೇರ್ಪಡೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ SENESE ಯೋಜನೆಯ ಅನುಷ್ಠಾನದ ಕುರಿತ MoU ಗೆ MoS(PM) ಮತ್ತು ಸಮೋವಾ ಪ್ರಧಾನಮಂತ್ರಿಗಳು ಸಹಿ ಹಾಕಿದರು.

4. MoS(PM) ಗೌರವಾರ್ಥ ಸಮೋವಾ ಪ್ರಧಾನಮಂತ್ರಿಯವರು ಅಧಿಕೃತ ಮಧ್ಯಾಹ್ನದ ಭೋಜನ ಕೂಟವನ್ನು ಆಯೋಜಿಸಿದರು. MoS(PM) ಸಮೋವಾದಲ್ಲಿರುವ ಭಾರತೀಯ ಸಮುದಾಯದ ಸದಸ್ಯರೊಂದಿಗೆ ಸಂವಹನ ನಡೆಸಿದರು.

5. ಆಕ್ಲೆಂಡ್‌ಗೆ ಅವರ ಪ್ರಯಾಣದ ಸಮಯದಲ್ಲಿ, MoS (PM) ಅವರು ಭಾರತ ನ್ಯೂಜಿಲೆಂಡ್ ಬಿಸಿನೆಸ್ ಮಂಡಳಿ (INZBC) ತಮ್ಮ ಗೌರವಾರ್ಥ ಆಯೋಜಿಸಿದ್ದ ವ್ಯಾಪಾರ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಈ ಕಾರ್ಯಕ್ರಮವು ಜವಳಿ ಮತ್ತು ಫ್ಯಾಷನ್ ವಲಯಗಳ ಪ್ರತಿನಿಧಿಗಳನ್ನು ದ್ವಿಪಕ್ಷೀಯ ಸಹಕಾರದ ಅವಕಾಶಗಳನ್ನು ಚರ್ಚಿಸಲು ಒಟ್ಟುಗೂಡಿಸಿತು. ನ್ಯೂಜಿಲೆಂಡ್‌ನ ಜನಾಂಗೀಯ ಸಮುದಾಯಗಳ ಸಚಿವ ಹಾಗೂ ಕ್ರೀಡೆ ಮತ್ತು ಮನರಂಜನಾ ಸಚಿವರಾದ ಗೌರವಾನ್ವಿತ ಮಾರ್ಕ್ ಮಿಚೆಲ್ ಅವರು ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. MoS(PM) ಅವರು ದುರ್ಗಾ ಪೂಜಾ ಆಚರಣೆಗಳಲ್ಲಿ ಕೂಡ ಭಾಗವಹಿಸಿದರು ಮತ್ತು ಭಾರತೀಯ ಸಮುದಾಯದ ಸದಸ್ಯರೊಂದಿಗೆ ಪ್ರತ್ಯೇಕವಾಗಿ ಸಂವಹನ ನಡೆಸಿದರು.

6. ನಾವೊರೊಗೆ ಭೇಟಿ ನೀಡಿದ ಸಂದರ್ಭದಲ್ಲಿ, MoS(PM) ಅವರು ನಾವೊರೊ ಗಣರಾಜ್ಯದ ಅಧ್ಯಕ್ಷರಾದ ಗೌರವಾನ್ವಿತ ಡೇವಿಡ್ ಡಬ್ಲ್ಯೂ. ಆರ್. ಅಡೆಯಾಂಗ್ ಅವರನ್ನು ಭೇಟಿ ಮಾಡಿದರು ಮತ್ತು ನಾವೊರೊ ಸಂಸತ್ತಿನ ಸ್ಪೀಕರ್ ಗೌರವಾನ್ವಿತ ಮಾರ್ಕಸ್ ಸ್ಟೀಫನ್ ಅವರನ್ನು ಪ್ರತ್ಯೇಕವಾಗಿ ಭೇಟಿಯಾದರು. ದ್ವಿಪಕ್ಷೀಯ ಸಹಕಾರ, ಸಂಸದೀಯ ವಿನಿಮಯಗಳು ಮತ್ತು ಸಾಮರ್ಥ್ಯ ವರ್ಧನೆ ಕುರಿತು ಚರ್ಚೆಗಳು ಕೇಂದ್ರೀಕೃತವಾಗಿದ್ದವು.

7. MoS (PM) ಭಾರತೀಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರ (ITEC) ಮತ್ತು ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿ (ICCR) ಕಾರ್ಯಕ್ರಮಗಳ ಹಳೆಯ ವಿದ್ಯಾರ್ಥಿಗಳೊಂದಿಗೆ ಮತ್ತು ಭಾರತೀಯ ಸಮುದಾಯದ ಸದಸ್ಯರೊಂದಿಗೆ ಸಂವಹನ ನಡೆಸಿದರು ಮತ್ತು ಭಾರತ-ನಾವೊರೊ ಸಂಬಂಧಗಳನ್ನು ಬಲಪಡಿಸಲು ಅವರ ಕೊಡುಗೆಯನ್ನು ಒತ್ತಿ ಹೇಳಿದರು.

8. ಭಾರತದ ತ್ವರಿತ ಪರಿಣಾಮ ಯೋಜನೆ (QIP) ಅಡಿಯಲ್ಲಿ, ಸ್ಥಳೀಯ ಕ್ರೀಡಾಪಟುಗಳನ್ನು ಬೆಳೆಸುವ ಮತ್ತು ಸೈಕ್ಲಿಂಗ್ ಮೂಲಕ ಆರೋಗ್ಯವನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ 'ಸೈಕ್ಲಿಂಗ್ ಫಾರ್ ಎ ಸ್ಮಾಯಿಂಗರ್ ನಾವೊರೊ' ಎಂಬ ಮಿನಿ-ಸೈಕ್ಲಿಂಗ್ ಕಾರ್ಯಕ್ರಮಕ್ಕೆ, MoS - PM ಚಾಲನೆ ನೀಡಿದರು. ಭೇಟಿಯ ಸಮಯದಲ್ಲಿ ಅವರು ನಾವೊರೊ ಸಾರ್ವಜನಿಕ ಆಸ್ಪತ್ರೆ ಮತ್ತು ಫಾಸ್ಫೇಟ್-ಮೈನಿಂಗ್ ಸೈಟ್‌ಗಳಿಗೆ ಭೇಟಿ ನೀಡಿದರು.

9. ಅಭಿವೃದ್ಧಿ ಸಹಕಾರ, ಸಾಮರ್ಥ್ಯ ವರ್ಧನೆ ಮತ್ತು ಜನರಿಂದ ಜನರ ನಡುವಿನ ವಿನಿಮಯಗಳ ಮೂಲಕ ಮತ್ತು ಭಾರತ-ಪೆಸಿಫಿಕ್ ದ್ವೀಪಗಳ ಸಹಕಾರಕ್ಕಾಗಿ ವೇದಿಕೆಯ ಚೌಕಟ್ಟಿನ ಅಡಿಯಲ್ಲಿ (FIPIC) ತನ್ನ ಪಾಲುದಾರಿಕೆಗಳನ್ನು ಬಲಪಡಿಸುವ ಭಾರತದ ಬದ್ಧತೆಯನ್ನು MOS(PM) ಭೇಟಿಯು ಪುನರುಚ್ಚರಿಸಿತು. ತಮ್ಮ ರಾಷ್ಟ್ರೀಯ ಅಭಿವೃದ್ಧಿ ಆದ್ಯತೆಗಳು ಮತ್ತು ಪ್ರದೇಶದ ಹಂಚಿಕೆಯ ಆಕಾಂಕ್ಷೆಗಳಿಗೆ ಬೆಂಬಲವಾಗಿ ಪೆಸಿಫಿಕ್ ದ್ವೀಪ ರಾಷ್ಟ್ರಗಳೊಂದಿಗೆ ನಿಕಟವಾಗಿ ಕೆಲಸ ಮಾಡಲು ಭಾರತ ಬದ್ಧವಾಗಿದೆ.

ನವದೆಹಲಿ

ಅಕ್ಟೋಬರ್ 23, 2026